I ಲೋಕಾಯುಕ್ತ ಹಾಗೂ ಉಪ ಲೋಕಾಯುಕ್ತ ರಚನೆಯಾದ ನಂತರ ಸರ್ಕಾರಿ ಇಲಾಖೆಗಳಲ್ಲಿ ಕಾರ್ಯ ಪ್ರವೃತ್ತಿಗಳು ವಿಫಲಗೊಂಡಿರುವುದರ ಬಗ್ಗೆ

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಲೋಕಾಯುಕ್ತ ಹಾಗೂ ಉಪಲೋಕಾಯುಕ್ತ ರಚನೆಯಾದ ನಂತರ ಜಾಗೃತ ಇಲಾಖೆ ಸ್ಥಗಿತಗೊಂಡಿರುವುದರಿಂದ ಸರ್ಕಾರಿ ಇಲಾಖೆಗಳಲ್ಲಿ ಕಾರ್ಯಪ್ರವೃತ್ತಿಗಳು ವಿಫಲಗೊಂಡಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲಿತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಓದುತ್ತೇನೆ.

ಲೋಕಾಯುಕ್ತ ಕಾಯ್ದೆಯು ೧೫-೧-೧೯೮೬ರ ದಿನಾಂಕದಿಂದ ಜಾರಿಗೆ ಬಂದಿದೆ. ಇದರಿಂದ ಈವರೆಗೂ ಇದ್ದ ಜಾಗೃತ ಆಯೋಗವು ಮತ್ತು ಜಾಗೃತ ಆಯೋಗದ ನಿಯಮಗಳು ಅಳಿದುಹೋದವು. ಜಾಗೃತ ಆಯೋಗದಲ್ಲಿ ಇದ್ದ ಆಯೋಗದ ಆಯುಕ್ತರನ್ನು ಬಿಟ್ಟು ಉಳಿದ ಸಿಬ್ಬಂದಿವರ್ಗದವರು ಲೋಕಾಯುಕ್ತದಲ್ಲಿ ವಿಲೀನವಾಗಿರುತ್ತಾರೆ.

ಲೋಕಾಯುಕ್ತರ ಅಧಿನಿಯಮವು ಜಾರಿಗೆ ಬಂದಾಗಿನಿಂದ ರಾಜ್ಯದ ಇತರ ಅಧಿನಿಯಮಗಳು ಮತ್ತು ನಿಯಮಗಳಿಗೆ ಸೂಕ್ತ ತಿದ್ದುಪಡಿಯನ್ನು ಮಾಡಿ ಲೋಕಾಯುಕ್ತರು, ಉಪಲೋಕಾಯುಕ್ತರು ಮತ್ತು ಅವರಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ ಸೂಕ್ತ ವಿಚಾರಣಾ ಅಧಿಕಾರವನ್ನು ಕೊಡಬೇಕಾಗಿದೆ. ಈಗಾಗಲೇ ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ ೧೯೫೭ಕ್ಕೆ ಸೂಕ್ತವಾದ ರೀತಿಯಲ್ಲಿ ತಿದ್ದುಪಡಿ ಮಾಡಲು ಈಗಾಗಲೇ ಕ್ರಮಂ ತೆಗೆದುಕೊಳ್ಳಲಾಗುತ್ತಿದೆ. ಅದೇ ರೀತಿ ಕರ್ನಾಟಕ ಇಲಾಖಾ ವಿಚಾರಣೆ, (ಸಾಕ್ಷಿಗಳ ಹಾಜರಾತಿ ಮತ್ತು ದಾಖಲೆಗಳನ್ನು ನೀಡುವಿಕೆ) ಕಾಯ್ದೆ ೧೯೮೧ಕ್ಕೆ ಸಹ ಸೂಕ್ತವಾದ ತಿದ್ದುಪಡಿ ಮಸೂದೆಯನ್ನು ತಯಾರಿ ಮಾಡಲಾಗಿದೆ. ಇದೂ ಅಲ್ಲದೆ ಈಗಿನ ಲೋಕಾಯುಕ್ತ ಅಧಿನಿಯಮಕ್ಕೆ ಲೋಕಾಯುಕ್ತರು, ಉಪಲೋಕಾಯುಕ್ತರು ಮತ್ತು ಅವರಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ ಕೆಲವು ಮುಖ್ಯವಾದ ಅಧಿಕಾರಗಳನ್ನು ನೀಡಬೇಕಾಗುತ್ತದೆ. ಈ ಅಂಶಗಳ ಬಗ್ಗೆ ಈಗಾಗಲೇ ತಿದ್ದುಪಡಿ ಮಸೂದೆಯನ್ನು ತಯಾರಿ ಮಾಡಲಾಗುತ್ತಿದೆ. ಈ ಎಲ್ಲಾ ತಿದ್ದುಪಡಿ ಆದ ನಂತರ ಲೋಕಾಯುಕ್ತರು, ಉಪಲೋಕಾಯುಕ್ತರು ಮತ್ತು ಅವರಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಸುಲಲಿತವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಅವಶ್ಯಕ ತಿದ್ದುಪಡಿಗಳನ್ನು ವಿಳಂಬವಿಲ್ಲದೆ ಜಾರಿಗೆ ತರಲು ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ. ಮಾನ್ಯ ಅಧ್ಯಕ್ಷರೇ, ಈ ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತ ಜಾರಿಗೆ ಬರುವ ಹಂತದಲ್ಲಿ ಇರುವಾಗ ರಾಜ್ಯದಲ್ಲಿ ಏನಾಗಿದೆ ಎಂದರೆ 'ಶೆಟ್ಟಿ ಶೃಂಗಾರದ ವೇಳೆಗೆ ಪಟ್ಟಣ ಹಾಳಾಯಿತು' ಎನ್ನುವ ಹಾಗೆ ಲಂಚಾವತಾರದ ಹಾವಳಿ ರಾಜ್ಯದಲ್ಲಿ ಜಾಸ್ತಿಯಾಗುತ್ತಿದೆ. ಮತ್ತು ಇನ್ನೊಂದು ಹೇಳಬೇಕೆಂದರೆ, ಬೆಕ್ಕಿಲ್ಲದ ಮನೆಯಲ್ಲಿ ಇಲಿಗಳ ಚಿಲ್ಲಾಟ— ಎನ್ನುವ ಹಾಗೆ ಸಾಮಾನ್ಯ ಒಬ್ಬ ರೈತ ಅಥವಾ ಕೂಲಿಕಾರ ಯಾರ ಮೇಲಾದರೂ ದೂರು ಕೊಡುವಾಗ ಅಫಿಡವಿಟ್ ಮಾಡಬೇಕಂ, ಐದುನೂರು ರೂಪಾಯಿಗಳ ಹಣವನ್ನು ಕಟ್ಟಬೇಕಾಗುತ್ತದೆ ? ಅದೂ ಒಂದು ತಿಂಗಳ ಅವಧಿಯಲ್ಲಿ. ಇದರಿಂದ ಅವರಿಗೆ ತುಂಬಾ ತೊಂದರೆಯಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸಮರ್ಪಕವಾಗಿ ಉತ್ತರ ಕೊಡುತ್ತಾರೆಯೆ?

ಅಧ್ಯಕ್ಷರು.—ಶ್ರೀ ನೀಲಕಂಠಪ್ಪನವರೇ, ಭಾಷಣ ಬೇಡ. ಮಂತ್ರಿಗಳು ಸಮರ್ಪಕವಾಗಿಯೇ ಉತ್ತರ ಕೊಟ್ಟಿದ್ದಾರೆ. ಇನ್ನೂ ಏನು ಕೇಳಬೇಕು ನೀವು ?

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಈ ಒಂದು ತಿಂಗಳ ಅವಧಿಯಲ್ಲಿ ಏನಾಗುತ್ತದೆ ಎಂದರೆ, ಅನೇಕ ದೂರುಗಳನ್ನು ಕೊಟ್ಟಿದ್ದಾರೆ. ಜಾಗ್ರತ ದಳಕ್ಕೆ ಹೋದರೆ, ಪೋಲೀಸರಿಗೆ ಕೊಡಿ ಎನ್ನುತ್ತಾರೆ. ಪೋಲೀಸರ ಹತ್ತಿರ ಹೋದರೆ ಬೇರೆಲ್ಲೋ ಹೇಳುತ್ತಾರೆ.

ಎಂದರೆ ಯಾರಿಗೆ ದೂರುಗಳನ್ನು ಕೊಡಬೇಕು ಎನ್ನುವ ಬಗ್ಗೆ ನಿರ್ದಿಷ್ಟ ಸೂಚನೆ ಇಲ್ಲ. ನಮಗೆ ಗೊತ್ತಿಲ್ಲ, ನಮಗೆ ಸಂಬಂಧಪಟ್ಟಿದಲ್ಲ ಎಂದು ಪ್ರತಿಯೊಬ್ಬರೂ ಹೇಳುತ್ತಾರೆ. ಮತ್ತೊಂದು ವಿಷಯವೆಂದರೆ ಅಲ್ಲಿನ ಅಧಿಕಾರವರ್ಗದವರಿಗೆ ಕನ್ನಡ ಜ್ಞಾನ ಇಲ್ಲ. ಇದರ ಬಗ್ಗೆ ತಾವು ಗಮನ ಕೊಡಬೇಕಾಗುತ್ತದೆ. ಈಗ ಸಧ್ಯಕ್ಕೆ ಎಲ್ಲಾ ಕೆಲಸಕಾರ್ಯಗಳು ಸ್ಥಗಿತವಾಗಿವೆ. ಆದ್ದರಿಂದ ಇದರ ಬಗ್ಗೆ ಗಮನಹರಿಸಿ ಸಾಮಾನ್ಯ ಮನುಷ್ಯ ದೂರನ್ನು ಕೊಟ್ಟರೂ ಕೂಡ ಅದಕ್ಕೆ ಮಾನ್ಯತೆ ಸಿಗಬೇಕೆಂದು ಹೇಳುತ್ತೇನೆ. ಇದಕ್ಕೆ ವಿಶೇಷ ತಿದ್ದುಪಡಿ ಅವಶ್ಯಕವಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ನೀಲಕಂಠಪ್ಪನವರು ವಿಷಯವನ್ನು ಸರಿಯಾಗಿ ತಿಳಿದು ಕೊಂಡ ಹಾಗೆ ಕಾಣುತ್ತಿಲ್ಲ. ಇದೇ ಸಭೆ ಈ ಮಸೂದೆಗೆ ಒಪ್ಪಿಗೆಯನ್ನು ಕೊಟ್ಟಿದೆ. ಆದ್ದರಿಂದ ಇದನ್ನು ಬದಲಾವಣೆ ಮಾಡುವ ಹಂತದಲ್ಲಿ ಇಲ್ಲ. ಕಾನೂನು ಪ್ರಕಾರ ಅವರಿಗೆ ತಮ್ಮ ದೂರುಗಳನ್ನು ಕೊಡಬೇಕಾಗುತ್ತದೆ. ಕೆಲವು ತಿದ್ದುಪಡಿಗಳನ್ನು ಮಾಡಬೇಕೆಂದು ನಾವು ಯೋಚನೆ ಮಾಡಿದ್ದೇವೆ. ಅದನ್ನು ಮಾಡುತ್ತೇವೆ. ಕೆಲಸ ಎಲ್ಲಾ ಸ್ಥಗಿತವಾಗಿದೆ, ಲಂಚ ಜಾಸ್ತಿ ಆಗಿದೆ ಎಂದು ಅವರು ಹೇಳಿದ್ದಾರೆ. ತಾವು ಯಾವುದಾದರೂ ನಿರ್ದಿಷ್ಟ ನಿದರ್ಶನ ತೋರಿಸಿದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ. ಇದರಿಂದ ಸೂಕ್ತವಾಗಿ ಬದಲಾವಣೆ ಮಾಡುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಆ ಮೂಲಕ ತೊಂದರೆಗಳನ್ನು ನಿವಾರಿಸಿದಂತಾಗುತ್ತದೆ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

II ಗುಲ್ಬರ್ಗಾ ನಗರದ ನೂರ್‌ಬಾಗ್‌ದಲ್ಲಿರುವ ಗೋರಿಯ ಹತ್ತಿರ ಅನಧಿಕೃತವಾಗಿ ಕಟ್ಟಡ ಕಟ್ಟಿರುವುದರ ಬಗ್ಗೆ.

ಶ್ರೀ ಎಸ್. ಕೆ. ಕಾಂತಾ.—ಗುಲ್ಬರ್ಗಾನಗರದ ನೂರ್‌ಬಾಗ್‌ದಲ್ಲಿರುವ ಗೋರಿಯ ಹತ್ತಿರ ಅನಧಿಕೃತವಾಗಿ ಕಟ್ಟಡ ಕಟ್ಟಿರುವುದರ ಬಗ್ಗೆ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಗುಲ್ಬರ್ಗಾ ನಗರದಲ್ಲಿ ಅನಧಿಕೃತ ಕಟ್ಟಡ ಕಟ್ಟಿರುವುದರ ಬಗ್ಗೆ ಮಾನ್ಯ ಸದಸ್ಯರ ಆಪಾದನೆ ಇದೆ. ಇದರ ಬಗ್ಗೆ ಕಾನೂನು ಪ್ರಕಾರ ತಿದ್ದುಪಡಿ ಮಾಡುವುದಕ್ಕೆ ಕಾರ್ಪೊರೇಷನ್ ಅಧಿಕಾರದಲ್ಲಿದೆ. ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರ ಇದೆ. ಮಾನ್ಯ ಸದಸ್ಯರ ಹೇಳಿಕೆಯನ್ನು ಲಿಖಿತ ಮೂಲಕ ಕೊಟ್ಟರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು —ಶ್ರೀ ಕಾಂತರವರೇ, ನೀವು ಬರೆದು ಕಳಿಸಿ.

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆಯನ್ನು ಮಾನ್ಯ ಮಂಖ್ಯಿ ಮಂತ್ರಿಯವರಿಗೆ ಹಾಕಿದ್ದೆ. ಆಫೀಸ್ ಆಫ್ ದಿ ಕ್ಯೂರೇಟರ್, ಡೈರೆಕ್ಟೋರೇಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಸಿಯಮ್ಸ್ ಇನ್ ಕರ್ನಾಟಕ, ಗುಲ್ಬರ್ಗಾ ಅವರು ಜಿಲ್ಲಾಧಿಕಾರಿಗಳಿಗೆ ಈ ರೀತಿ ಪತ್ರ ಬರೆದಿದ್ದಾರೆ.

"With reference to above subject, I have to submit that one Shri Osman Shah/ S/o Mahboob Shah has constructed a shed attached to the tomb in Noorbag area which is a protected monument.

A notice cited under reference No. 2 has issued to Shri Osman Shah for removal of the shed constructed illegally attached to the tomb (protected Monument).

The said Osman Shah through his letter dated 29-7-85 has accepted that he has constructed the room (Shed) by oversight and requested to grant time for removal of the said shed.